<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರ: 228/24
ಸಿಡಬ್ಲ್ಯೂ- 10
ಪಿಡಬ್ಲ್ಯೂ- 9

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಪದ್ಮನಾಭ ಆಚಾರ್ಯ |
| ತಂದೆಯ ಹೆಸರು | : | ಸುಬ್ರಾಯ ಆಚಾರ್ಯ |
| ಪ್ರಾಯ | : | 60 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ, ಹಾಲಾಡಿ |
| ವಾಸ | : | ಹಾಲಾರಿ |

ದಿನಾಂಕ: **24- 02-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು ದಿನಾಂಕ 29-05-2016 ರಂದು ರಾತ್ರಿ 10 ಗಂಟೆಗೆ ಚಾಸಾ 1 ಜಯಕರ ಎನ್ನುವವರನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರಿಂದ ಅವರ ಗಾಯಾಗಳನ್ನು ನೋಡಿ ಚಿಕಿತ್ಸೆ ನೀಡಿರುತ್ತೇನೆ. ಗಾಯಾದ ಗಂಭೀರತೆಯನ್ನು ಕೂಲಂಕುಷವಾಗಿ ತಪಾಸಣೆಗೆ ಒಳಪಡಿಸಿ ಚಿಕಿತ್ಸೆ ನೀಡಿರುತ್ತೇನೆ. ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಆದರ್ಶ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಾನು ಚಾಸಾ 1 ರವರನ್ನು ನೋಡಿದಾಗ

1. ಎಡ ಹಣೆ ಮತ್ತು ಎಡ ಕಣ್ಣಿನ ಹುಬ್ಬು ಜಾಗದಲ್ಲಿ ಒಂದು ಸೀಳು ಗಾಯ ಹಾಗೂ ಜಜ್ಜಿದ ಗಾಯ ಕಂಡು ಬಂದಿರುತ್ತದೆ. ಆ ಗಾಯವನ್ನು ಸಿ.ಟಿ ಸ್ಕ್ಯಾನ್ ಗೆ ಒಳಪಡಿಸಿದಾಗ ಆ ಭಾಗದಲ್ಲಿಯೇ ಮೆದುಳಿನ ಮುಂಭಾಗ ಊತ ಹಾಗೂ ರಕ್ತ ಹೆಪ್ಪು ಗಟ್ಟಿದ್ದು ಕಂಡು ಬಂದಿರುತ್ತದೆ.

2. ಆ ಭಾಗದ ಸುತ್ತಮುತ್ತಲಿನ ಮುಖದ ಮೂಳೆ ಮುರಿತ ಕಂಡು ಬಂದಿದ್ದು, ಆ ಕೆನ್ನೆಯಲ್ಲಿ ರಕ್ತ ಹೆಪ್ಪುಗಟ್ಟಿದ್ದು ಕಂಡು ಬರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ನನ್ನ ಅಭಿಪ್ರಾಯದಂತೆ ಆ ಗಾಯಾಳುವಿಗೆ ಆದಾ ಗಾಯ ತೀವ್ರ ಸ್ವರೂಪದ ಗಾಯ ಆಗಿರುತ್ತದೆ. ಸದರಿ ಗಾಯಾದ ಪ್ರಮಾಣ ಪತ್ರವನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಇದು ಹಲ್ಲೆಗೆ ಒಳಗಾಗಿ ಆದ ಗಾಯ ಎನ್ನಲಾಗಿ ನಮೂದಿಸಿ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ.

ಈ ವಿಚಾರದಲ್ಲಿ ಶಂಕರನಾರಯಣ ಠಾಣೆಯಿಂದ ನ್ಯಾಯಲಯದಿಂದ ಮುಂದೆ ಇರುವ ವುಡನ್ ರಾಡ್ ಹಾಜರು ಪಡಿಸಿ ಸದರಿ ವುಡನ್ ರಾಡ್ ನಿಂದ ನಿ.ಪಿ. 7 ರಲ್ಲಿ ನಮೂದಿಸಿದ

ಗಾಯ ಆಗಿರುವ ಸಾಧ್ಯತೆ ಇದೆಯಾ ಎಂದರೆ ಸಾಕ್ಷಿ ನ್ಯಾಯಲಯದ ಮುಂದೆ ಇರುವ ವುಡನ್ ರಾಡ್ ನಿಂದ ಹೊಡೆದರೆ ನಮೂದಿಸಿದ ಗಾಯ ಆಗುವ ಸಾಧ್ಯತೆ ಇದೆ ಎಂದು ವರದಿಯನ್ನು ನೀಡಿರುತ್ತೇನೆ ಎಂದು ನುಡಿದು, ಅದನ್ನು ನಿ.ಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 8(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್‌ಡಿ .ಎಸ್.ರವರಿಂದ</u>

1. ನನ್ನ ಬಳಿಗೆ ಬಂದಾಗ ಚಾಸಾ 1 ರವರು ಪ್ರಜ್ಞಾ ಸ್ಥಿತಿಯಲ್ಲಿದ್ದರು. ಚಾಸಾ 1 ರವರ ಜೊತೆಗೆ ಯಾರು ಬಂದಿದ್ದರು ಎಂದು ನನ್ನ ದಾಖಲೆಯಲ್ಲಿ ನಮೂದಿಸಿಲ್ಲ. ನಾನು ಯಾರು ಹಲ್ಲೆ ಮಾಡಿದ್ದಾರೆ ಎಂದು ದಾಖಲಿಸಿರುವುದಿಲ್ಲ. ಒಬ್ಬ ವ್ಯಕ್ತಿ ಬೈಕ್ ನಲ್ಲಿ ಹೋಗುವಾಗ ಸ್ಕೀಡ್ ಆಗಿ ಬಿದ್ದಾಗ ಅವರ ತಲೆಯ ಭಾಗ ಬಲವಾಗಿ ನೆಲಕ್ಕೆ ಬಿದ್ದರೆ ನಿ.ಪಿ.7 ರಲ್ಲಿ ನಮೂದಿಸಿದ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ.

2. ಆ ದಿನ ಪೊಲೀಸರು ಹಾಜರು ಪಡಿಸಿದ ದೊಣ್ಣೆಯನ್ನು ಸೀಲ್ ಮಾಡಿ ಕೊಟ್ಟಿರುತ್ತಾರೆಯಾ ಎಂದರೆ ಸಾಕ್ಷಿ ಸಾಧಾರಣ ದೊಣ್ಣೆಯನ್ನು ಹಾಜರು ಪಡಿಸಿರಬಹುದು, ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಪರಿಶೀಕ್ಷಿಸಿದ ನಂತರ ಆ ದೊಣ್ಣೆಯನ್ನು ಮರು ಪ್ಯಾಕ್ ಮಾಡಿ ನನ್ನ ಸಹಿ ಹಾಗೂ ಸೀಲ್ ಹಾಕಿ ಕೊಟ್ಟಿರುವುದಿಲ್ಲ. ಮು.ಮಾಲು 1 ನ್ನು ನನ್ನ ಬಳಿ ಅಭಿಪ್ರಾಯಕ್ಕೆ ತಂದಿರುತ್ತಾರೆ ಎಂದು ನಿಖರವಾಗಿಹೇಳಲು ಬರುವುದಿಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ